

ಇದಕ್ಕೆ ಡ್ರೈ ಮಾಡಿ ಕುದಿ ಅಳತೆ ತಪ್ಪದಂತೆ ಮಾಡುತ್ತಾರೆ. ಉತ್ತಮ ಗುಣಮಟ್ಟದ ಖಾದಿ ಬಟ್ಟೆ ಎಷ್ಟೇ ದಿನಗಳಾದರೂ ಬಣ್ಣ ಮಾಸುವುದಿಲ್ಲ, ಅಂದಗೆಡುವುದಿಲ್ಲ. ಬಿಸಿಗಾಳಿಗೆ ಕೂಲ್ ಆದ ಅನುಭವ ನೀಡುತ್ತದೆ. ಚಳಿಗಾಲಕ್ಕೆ ಬೆಚ್ಚನೆ ಅನುಭವ, ಸೆಕೆಗಾಲಕ್ಕೆ ತಣ್ಣಗಿನ ಭಾವ.. ಇದು ಖಾದಿ ಬಟ್ಟೆಯ ವಿಶೇಷ. ಖಾದಿಯಲ್ಲಿ ಸೀರೆ ಮಾತ್ರವಲ್ಲದೆ ಸಲ್ವಾರ್, ಕುರ್ತಿ, ಜುಬ್ಬ, ಲುಂಗಿ, ಬೆಡ್‌ಸ್ಪ್ರೆಡ್, ಬೆಡ್‌ಶೀಟ್‌ಗಳನ್ನೂ ತಯಾರಿಸಿ ಬಳಸಬಹುದು. ಒಗೆದಷ್ಟೂ ತೆಳುವಾಗುವ, ಹಗುರವಾಗುವ ಈ ಬಟ್ಟೆ ಗುಣಮಟ್ಟದಲ್ಲಿ ಇನ್ನೂ ಉತ್ತಮವಾಗುತ್ತಾ ಹೋಗುತ್ತದೆ. ಒಂದು ಸೀರೆ ತಯಾರಾಗಬೇಕಾದರೆ ನೇಕಾರರ ಶ್ರಮ ವಿಪರೀತ. ಹೀಗಾಗಿ ಇದಕ್ಕೆ ತೆರುವ ಬೆಲೆ ದುಬಾರಿ ಎನಿಸಲಾರದು. ಉಳಿದ ಬಟ್ಟೆಯಿಂದ ಕೈಚೀಲ, ಕುಶನ್ ಕವರ್, ಕುಚ್ಚು ಮುಂತಾದವನ್ನು ತಯಾರಿಸಬಹುದು.

ಖಾದಿ ಉಡುಪಿಗೆ ಕಾಲದ ಹಂಗಿಲ್ಲ. ಎಲ್ಲ ಕಾಲಕ್ಕೂ ಸೂಕ್ತವಾಗುವ, ಎಲ್ಲ ವಯೋಮಾನಕ್ಕೂ ಒಪ್ಪುವ, ಫ್ಯಾಷನ್‌ಗೂ ಸಂಪ್ರದಾಯಕ್ಕೂ ಸೈ. ಕಾಲಕ್ಕೆ ತಕ್ಕಂತೆ ನಮ್ಮ ದಿರಿಸು ಬದಲಾದರೂ ಖಾದಿ ಬಟ್ಟೆಯಲ್ಲೂ ಮಾರ್ಪಾಡು ಆಗುತ್ತಿರುತ್ತದೆ.

## ಮ್ಯಾಚಿಂಗ್ ಹೀಗೆ ಮಾಡಿ

- ಸೀರೆ ಹಗುರವಾಗಿರುವುದರಿಂದ ಸ್ಕಾರ್ಫ್ ರೀತಿಯಲ್ಲೂ ಬಳಸಬಹುದು.
- ಯಾವ ಬಣ್ಣದ ಸೀರೆಯಾದರೂ ಕಲಂಕಾರಿ ರವಿಕೆ ಚೆನ್ನಾಗಿ ಮ್ಯಾಚ್ ಆಗುತ್ತದೆ.
- ಖಾದಿ ಸಿಲ್ಕ್ ಸೀರೆಯನ್ನು ಯಾವ ಮಾದರಿಯಲ್ಲಾದರೂ ಉಡಬಹುದು.
- ಒಂದು ಪದರ ಸೆರಗು ಹೆಚ್ಚು ಲುಕ್ ಕೊಡಲು ಸಹಕಾರಿ.
- ಸೀರೆಯ ಬಣ್ಣಕ್ಕೆ ಕಾಂಟ್ರಾಸ್ಟ್ ಆಗಿರುವ ಬ್ಲೌಸ್ ತೊಡಬಹುದು.
- ಬ್ಲೌಸ್ ಹೈ ನೆಕ್ ಆಗಿದ್ದರೆ ಹೆಚ್ಚು ಸೂಕ್ತವಾಗಿ ಒಪ್ಪುತ್ತದೆ.
- ಖಾದಿ ಸಿಲ್ಕ್ ಮತ್ತು ಪಟ್ಟು ಸೀರೆಗೆ ಕುಂದನ್ ವರ್ಕ್ ಇರುವ, ಬಂಗಾರದ ಜರಿ ಅಂಚಿನದು, ಹರಳುಗಳ ಕುಸುರಿ ಇರುವ ಬ್ಲೌಸ್‌ಗಳು ಚೆನ್ನಾಗಿ ಕಾಣುತ್ತದೆ.
- ಖಾದಿ ಸಿಲ್ಕ್ ಸೀರೆಗೆ ಬೆಳ್ಳಿ ಬಣ್ಣದ ಕಸೂತಿ ಇರುವ ಬ್ಲೌಸ್ ಕೂಡ ಸರಿ ಹೊಂದುತ್ತದೆ.

ಗುಣಮಟ್ಟ ಮಾತ್ರ ಅದೇ ರೀತಿಯಲ್ಲಿರುತ್ತದೆ.

‘ಪಾಲಿಯೆಸ್ಟರ್, ಸಿಂಥೆಟಿಕ್ ಸೀರೆ ಮುಂತಾದವು ಕೆಲವೊಮ್ಮ ಔಟ್‌ಡೇಟೆಡ್ ಆಗುವ ಸಾಧ್ಯತೆ ಇದೆ. ಆದರೆ ಖಾದಿ ಮತ್ತು ಖಾದಿ ಸಿಲ್ಕ್ ಎಂದಿಗೂ ‘ಔಟ್ ಆಫ್ ಫ್ಯಾಷನ್’ ಆಗುವುದೇ ಇಲ್ಲ. ಜತೆಗೆ ಬಡವರಿಂದ ಹಿಡಿದು ಶ್ರೀಮಂತರವರೆಗೆ ಯಾರು ಬೇಕಾದರೂ ಖಾದಿ ಬಟ್ಟೆ ಧರಿಸಿ ಖುಷಿ ಪಡಬಹುದು. ಬಡವರಿಗೂ ಖಾದಿ ಉಡುಪು ಕೈಗೆಟುಕುವಂತಿದೆ. ಇದರಲ್ಲಿ ತರಾವರಿ ಬೆಲೆಯ ಉಡುಗೆ ತೊಡುಗೆ ಸಿಗುವುದರಿಂದ ಯಾರು ಬೇಕಾದರೂ ಕೊಳ್ಳಬಹುದು. ಇದು ಸಖತ್ ಲುಕ್ ಹಾಗೂ ಗಂಭೀರತೆಯನ್ನು ಪ್ರತಿಬಿಂಬಿಸುವ ಉಡುಗೆ’ ಎನ್ನುತ್ತಾರೆ ಬೆಂಗಳೂರಿನ ಖಾದಿ ಸಿಲ್ಕ್ ಸೀರೆ ಡಿಸೈನರ್ ಮಂಜುಳಾ ನಾಗೇಶ್.

‘ಖಾದಿ ಸೀರೆ ಹಗುರವಾಗಿದ್ದು ತೊಟ್ಟುಕೊಳ್ಳಲು ಆರಾಮದಾಯಕವಾಗಿದೆ. ಇದು ಪ್ರೊಫೆಷನಲ್ ಲುಕ್ ನೀಡಲು ಸಹಕಾರಿ’ ಎನ್ನುತ್ತಾರೆ ಅವರು.

ಸಾಮಾನ್ಯವಾಗಿ ಖಾದಿ ಸೀರೆ ಒಂದೂವರೆ ಸಾವಿರ ರೂಪಾಯಿಗಳಿಂದ ನಾಲ್ಕು ಸಾವಿರ ರೂಪಾಯಿಗಳವರೆಗೂ ಸಿಗುತ್ತದೆ. ಸಾದಾ ಖಾದಿ ಸೀರೆ ಐನೂರರಿಂದ ಮೂರು ಸಾವಿರ ರೂಪಾಯಿಗಳವರೆಗೂ ಲಭ್ಯವಿದೆ.